ಕೋವಿಡ್ ಸೋಂಕು ಉತ್ತಮ ನಿವಾರಣೆ ಹಾಗು ರಾಜ್ಯದಲ್ಲಿ ಕೋಮುವಾದೀಕರಣ ತಡೆಗಟ್ಟುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಿರಂಗ ಪತ್ರ

ಶ್ರೀ ಬಿ.ಎಸ್.ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ

ಮೇ ೦೬, ೨೦೨೧

ಮಾನ್ಯರೇ

ರಾಜ್ಯದಲ್ಲಿ ಕೋವಿಡ್ ಸೋಂಕಿನ ವಿರುದ್ದದ ಕ್ರಮಗಳ ಕೋಮುವಾದೀಕರಣ ಬಗ್ಗೆ ನಮಗೆಲ್ಲ ನೋವಾಗಿದ್ದು ಹಾಗು ಆತಂಕವಾಗಿದ್ದು , ಇದರ ಬಗ್ಗೆ ತಮಗೇ ಈ ಪತ್ರವನ್ನು ಬರೆಯುತ್ತಿದ್ದೇವೆ.

ಸಂಸದರಾದ ಶ್ರೀ ತೇಜಸ್ವಿ ಸೂರ್ಯರವರು , ಶಾಸಕರಾದ ಶ್ರೀ ರವಿ ಸುಬ್ರಮಣ್ಯ , ಶ್ರೀ ಉದಯ್ ಗರುಡಾಚಾರ್ , ಶ್ರೀ ಸತೀಶ್ ರೆಡ್ಡಿರವರು ಬಿಬಿಎಂಪಿ ನಲ್ಲಿ ಬೆಡ್ ಬುಕಿಂಗ್ ಹಗರಣವನ್ನು ಬಯಲುಗೊಳಿಸಿದರು . ತೀವ್ರ ಸಮಸ್ಯೆಯಾದ ಬೆಡ್ ಬುಕಿಂಗ್ ವ್ಯವಸ್ಥೆ ಸರಿಪಡಿಸುವ ಯಾವುದೇ ಕ್ರಮಗಳು ಸ್ವಾಗತಾರ್ಹ . ಈ ಹಗರಣದ ಬಗ್ಗೆ ಸಂಸದರು ಹಾಗು ಶಾಸಕಾರು ಪೋಲೀಸ್ ದೂರನ್ನು ನೀಡಿ, ತನಿಖೆ ಆಗುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಿತ್ತು .

ಆದರೆ ಇದು ಮಾಡುವುದು ಬಿಟ್ಟು ಈ ನಾಲಕ್ಕು ಜನಪ್ರತಿನಿಧಿಗಳು ವಿಷಯದ ತೀವ್ರ ಕೋಮುವಾದೀಕರಣಕ್ಕೆ ಕಾರಣರಾಗಿದ್ದಾರೆ . ವಾರ್ ರೂಮ್ ಗೆ ಹೋಗಿ ಅಲ್ಲಿ ಅಧಿಕಾರಿಗಳ ಮೇಲೆ ಅಸಭ್ಯವಾಗಿ ಕೂಗಾಡಿ, "ನೀವು ಮದ್ರಾಸಾಗೆ ಜನಗಳನ್ನು ಆಯ್ಕೆ ಮಾಡಿದ್ದೀರಾ" " ಅವರನ್ನು ಹಾಜ್ ಗೆ ಕಳಿಸುವಿರಾ" ಎಂತೆಲ್ಲ ಕೂಗಾಡಿ, ಅಲ್ಲಿನ ೨೦೫ ಜನರಲ್ಲಿ ಕೇವಲ ೧೭ ಜನರ ಮುಸ್ಲಾಮಾನರ ಹೆಸರನ್ನು ಓದಿ ಹಗರಣಕ್ಕೆ ಒಂದು ಧರ್ಮದವರೇ ಕಾರಣವೆಂಬಂತೆ ಆರೋಪಿಸಿದ್ದಾರೆ , ಹದಿನೇಳು ಜನ ಯುವಕರ ಹೆಸರುಗಳನ್ನೂ ಆ ರೀತಿ ತಪ್ಪಿಸ್ಥರಂತೆ ಘೋಷಿಸಿ ಅವರಿಗೆ ಅಪಾಯವಾಗುವ ಸಂಭವವಿದೆ .

ಇದು ಅಲ್ಲದೆ ಈ ವಿಷಯದ ಬಗ್ಗೆ ಪತ್ರಿಕಾ ಘೋಷ್ಠಿ ನಡೆಸಿ ಅದರಲ್ಲಿ ಕೇವಲ ಕ್ರೈಸ್ತ ಅಥವಾ ಮುಸ್ಲಾಮಾನ ಸಿಬ್ಬಂದಿ ಹೆಸರು ಮಾತ್ರ ಹಂಚಿಕೊಳ್ಳುತ್ತಾರೆ . ಅವರ ಬೆಂಬಲಿಗರು ಮುಸ್ಲಿಂ ಹಾಗು ಕ್ರೈಸ್ತ ಬಿಬಿಎಂಪಿ ಸಿಬ್ಬಂದಿಯನ್ನು ವಿನಾಕಾರಣ ವಾಟ್ಸ್ಇ ಆಪ್ ಮೆಸೇಜ್ ಗಳ ಮೂಲಕ ಗುರಿ ಮಾಡಿ ಅವರನ್ನು ತೀವ್ರವಾದಿಗಳೆಂದು ಕರೆದು ನೋವು ಉಂಟು ಮಾಡಿದ್ದಾರೆ . ಅವರ ಒತ್ತಡದಿಂದ ೧೭ ಜನ ಕಾರ್ಮಿಕರನ್ನು ವಿನಾಕಾರಣ ಕೆಲಸದಿಂದ ತೆಗೆಯಲಾಯಿತು .
ಮಾನ್ಯರೇ , ಮುಖ್ಯಮಂತ್ರಿಗಳಾಗಿ , ಈ ನಾಲಕ್ಕು ಜನ ಪ್ರತಿನಿಧಿಗಳು ಮಾಡಿರುವ ಕೋಮುವಾಧಿಕಾರಣಕ್ಕೆ ಜವಾಬ್ದಾರಿ ವಹಿಸಿ , ರಾಜ್ಯದ ಜನತೆಗೆ ಕ್ಷಮೆಯಾಚಿಸುವಂತೆ ನಿರ್ದೇಶಿಸಿ . ಹಾಗೆಯೇ ಕೆಲಸ ಕಳೆದುಕೊಂಡು ನೋವನ್ನು ಅನುಭವಿಸುವ ಈ ಕಾರ್ಮಿಕರಿಗೆ ಇಜನ ಪ್ರತಿನಿಧಿಗಳ ತಮ್ಮ ಕೈಯಿಂದ , ಪ್ರತಿ ಕಾರ್ಮಿಕರಿಗೆ ೫೦,೦೦೦ ರೂಪಾಯಿ ಪರಿಹಾರ ನೀಡುವಂತೆ ಒತ್ತಾಯಿಸಿ . ಹಾಗು ಈ ಇಡೀ ಪ್ರಕರಣದ ಬಗ್ಗೆ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ಅಡಿಯಲ್ಲಿ ತನಿಖೆಗಾಗಿ ತಾವು ಆದೇಶಿಸಬೇಕೆಂದು ಒತ್ತಾಯಿಸುತ್ತೇವೆ .

ಅಲ್ಲದೆ ರಾಜ್ಯದ ಜನರ ನೋವನ್ನು ನಿಭಾಯಿಸಲು , ಜೀವನ ಹಾಗು ಜೀವನೋಪಾಯಗಳನ್ನು ಉಳಿಸಲು ತಾವು ತುರ್ತಾಗಿ ಈ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ

೧)ಕೋವಿಡ್ ವಿರುದ್ದದ ಕ್ರಮಗಳನ್ನು ಕೇಂದ್ರೀಕೃತ ಮಾಡುವ ಬದಲು ವಿಕೇಂದ್ರೀಕೃತಿಸಿ. ಪ್ರತಿ ವಾರ್ಡ್ ಹಾಗು ಪಂಚಾಯತ್ ಗಳಲ್ಲಿ ಆಮ್ಲಜನಕ , ವೈದ್ಯರ ಚಿಕಿತ್ಸೆ , ಲಸಿಕೆ , ಔಷಧಿ ದೊರಕುವಂತೆ ಮಾಡಿ
೨)ಚಾಮರಾಜನಗರ, ಕಲಬುರ್ಗಿ , ಬೆಂಗಳೂರು ಹಾಗು ಇತರೆ ಜಿಲ್ಲೆಗಳಳ್ಳಿ ಆಮ್ಲಜನಕ ವಿಲ್ಲದೆ ಜನರು ಸಾವಿನಪ್ಪಿರುವುದು ಖಂಡನೀಯ ಹಾಗು ಆಘಾತಕಾರಿ ವಿಷಯವಾಗಿದೆ . ಇದರ ಕುರಿತಂತೆ ಆದಷ್ಟು ಬೇಗ ತನಿಖೆ ಮನಡೆಸಬೇಕು ಹಾಗು ಇದಕ್ಕೆ ಕಾಯಾನವಾದ ಅಧಿಕಾರಿಗಳು ಹಾಗು ಜನ ಪ್ರತಿನಿಧಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.
೩)ಕರ್ನಾಟಕದಲ್ಲಿ ಎಲ್ಲರಿಗು ಉಚಿತ ಲಸಿಕೆಗಳನ್ನು ನೀಡಬೇಕು ಹಾಗು ನಮ್ಮ ರಾಜ್ಯದಲ್ಲಿ ಲಸಿಕೆಗೆ ಉತ್ಪಾದನೆಗೆ ಅಗತ್ಯ ಕ್ರಮಗಳು ತೆಗೆದುಕೊಳ್ಳಬೇಕು
೪)ಕೋವಿಡ್ ಎದುರಿಸಲು ಪ್ರತಿ ವಾರ್ಡ್ ಅಥವಾ ಪಂಚಾಯತ್ ಗಳಲ್ಲಿ ಅಲ್ಲಿನ ಸ್ಥಳೀಯ ನಿವಾಸಿಗಳ ಸಮಿತಿ (ಆಡ್ಡಲ್ಲಿರುವ ವೈದ್ಯರು, ವಕೀಲರು, ಸಮಾಜ ಸೇವಕರು ಇತ್ಯಾದಿ ಜನರನು ಸೇರಿಸಿ) ಮಾಡಿ ಸೋಂಕು ನಿವಾರಣೆ ಅದರ ಮೂಲಕ

ಆಗಬೇಕು
೫)ವಾರ್ಡ್ /ಪಂಚಾಯತ್ ಮಟ್ಟದ ಹೆಲ್ಪ್ ಲೈನ್ ನಂಬರಗಳು ಸ್ಥಾಪಿಸಬೇಕು
೬)ಜಿಲ್ಲಾಡಳಿತವು ಎಲ್ಲ ಅಗತ್ಯ ಔಷದಿ , ಆಮ್ಲಜನಕ ಇತ್ಯಾದಿ , ಜಿಲ್ಲಾವಾರು ಸರಬರಾಜು ಆಗುವಂತೆ ನೋಡಿಕೊಳ್ಳಬೇಕು
೭)ರಾಜ್ಯದ ಉಚ್ಚ ನ್ಯಾಯಾಲಯ ಆದೇಶಿಸಿದಂತೆ ಪ್ರತಿ ವಾರ್ಡ್ ನಲ್ಲಿ ವಿಪ್ಪತ್ತು ನಿರ್ವಹಣಾ ಸಮಿತಿಗಳನ್ನು ರಚಿಸಬೇಕು ಹಾಗು ಈ ಸಮಿತಿಗಳು ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಹಾಗು ರಾಜ್ಯ ವಿಪತ್ತು ನಿರ್ವಹಣಾ ಸಮಿತಿಗಳೊಂದಿಗೆ ಉತ್ತಮ ಸಮನ್ವಯದ ಮೂಲಕ ಕಾರ್ಯ ನಿರ್ವಹಿಸಬೇಕು
೮)ಬೆಡ್ ಬುಕಿಂಗ್ , ಔಷದಿ ಸರಬರಾಜು ಇವುಗಳಲ್ಲಿ ಯಾವುದೇ ಭ್ರಷ್ಟಾಚಾರ ವಿಲ್ಲದಂತೆ ಪಾರದರ್ಶಕ ವ್ಯವಸ್ಥೆ ತರಬೇಕು
೯)ಎಂ.ಬಿ.ಬಿ.ಎಸ್ ಕೊನೆಯ ಸಾಲು ಓದುತ್ತಿರುವ ವಿಧಾರ್ಥಿಗಳನ್ನು ರಾಜ್ಯದ ಪಿ.ಎಚ್.ಸಿ ಹಾಗು ಅಂಗನವಾಡಿಗಳಲ್ಲಿ ಕಾರ್ಯ ನಿರ್ವಹಿಸುವಂತೆ ಆದೇಶಿಸಬೇಕು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಬೇಕಾದ ಆರ್ಥಿಕ ಹೂಡಿಕೆ ಮಾಡಬೇಕು
೧೦) ನಾಡಿನಲ್ಲಿ ಇಂಟರ್ ನೆಟ್ ಇಲ್ಲದ ಅನೇಕರಿಗೆ ಮಾಹಿತಿಯ ಕೊರತೆ ಇದೆ . ಪ್ರತಿ ವಾರ್ಡ್ / ಪಂಚಾಯಿತಿಯಲ್ಲಿ , ಕರಪತ್ರ ಹಾಗು ಆಟೋ ಗಳಲ್ಲಿ ಪ್ರಕಟಣೆ ಮೂಲಕ -
ಕೋವಿಡ್ ಪರೀಕ್ಷೆ ಕೋವಿಡ್ ಸೋಂಕು ಎದುರಿಸಲು ಮಾಡಬೇಕಾಗಿರುವ ದೈಹಿಕ ಅಂತರ, ಮಾಸ್ಕ್ ಧರಿಸುವಿಕೆ ಕೋವಿಡ್ ಸೋಂಕು ಬಂದರೆ ಅದರ ನಿರ್ವಹಣೆ
ಇವುಗಳ ಬಗ್ಗೆ ಮಾಹಿತಿ ತಲುಪಿಸಬೇಕು
೧೧) ಪಂಚಾಯತ್ ಹಾಗು ವಾರ್ಡ್ ಗಳಲ್ಲೇ ಎಕ್ಸ್ ರೇ ಹಾಗು ಸ್ಕಾನಿಂಗ್ ಸೌಲಭ್ಯ ಒದಗಿಸಬೇಕು . ಏಕೆಂದರೆ ಇದಲ್ಲದೆ ಅನೇಕ ಬಡವರು ಚಿಕಿತ್ಸೆ ಪಡೆದುಕೊಳ್ಳುವುದು ಕಷ್ಟವಾಗಿದೆ
೧೧)ಇನ್ನಷ್ಟು ಕೋವಿಡ್ ಕೇರ್ ಕೇಂದ್ರಗಳನ್ನು ಸ್ಥಾಪಿಸಬೇಕು , ಫೀವರ್ ಕ್ಲಿನಿಕ್ ಮರು ಸ್ಥಾಪಿಸಬೇಕು . ಈ ಒಂದು ಹೆಜ್ಜೆ ಅತಿ ಮುಖ್ಯವಾದದ್ದು
೧೨)ಉಚಿತ ಮಾಸ್ಕ್ ಹಾಗು ಸ್ಯಾನಿಟೈಜರ್ ಎಲ್ಲರಿಗು ದೊರಕುವಂತೆ ಮಾಡಬೇಕು
೧೩)ಚಿತಾಗಾರದಲ್ಲಿ , ಆಸ್ಪತ್ರೆಗಳಲ್ಲಿ ಹಾಗು ಹಲವು ಕಡೆ ಕಾರ್ಯ ನಿರ್ವಹಿಸುತ್ತಿರುವ frontline ಕಾರ್ಮಿಕರೆಲ್ಲರಿಗೂ ಉತ್ತಮ ಪರಿಹಾರಬೇಕಾದ ರಜೆ ಪಿ.ಪಿ.ಈ ಹಾಗು ಸ್ಯಾನಿಟರಿ ನ್ಯಾಪ್ಕಿನ್ ವಿಶ್ರಾಂತಿಯ ಸೌಲಭ್ಯ ಮಾನಸಿಕ ಆರೋಗ್ಯ ವ್ಯವಸ್ಥೆ ಹಾಗು tele counselling facilitiesಉತ್ತಮ ಪೌಷ್ಠಿಕ ಆಹಾರ ಇವೆಲ್ಲವನ್ನೂ ನೀಡಬೇಕು
೧೪)ಕೋವಿಡ್ಪ ರೀಕ್ಷೆ, ಆರೈಕೆ ಮತ್ತು ವ್ಯಾಕ್ಸಿನೇಷನ್ ಎಲ್ಲರಿಗೂ ತಲುಪುವ ಉದ್ದೇಶ ಪೂರೈಸಲು ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ಲೈಂಗಿಕ ಅಲ್ಪಸಂಖ್ಯಾತರು, ಲೈಂಗಿಕ ಕಾರ್ಯಕರ್ತರು, ಅಂಗವಿಕಲರು, ಅನಾಥರು ಮತ್ತು ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಎನ್‌ಜಿಒಗಳೊಂದಿಗೆ ರಾಜ್ಯವು ಕೆಲಸ ಮಾಡಬೇಕು.
೧೫)ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳನ್ನು ಉತ್ತಮ ಪಡಿಸಲು ಸರ್ಕಾರಗಳೊಂದಿಗೆ ಎಲ್ಲಾ ಹಂತದಲ್ಲೂ ಕೆಲಸ ಮಾಡಲು ನಾವು ಸಂತೋಷಪಡುತ್ತೇವೆ. ಅದೇ ಸಮಯದಲ್ಲಿ, ಶ್ರೀ ತೇಜಸ್ವಿ ಸೂರ್ಯ ಅವರು ಬಿಜೆಪಿ ಯುವ ಮೋರ್ಚಾ ಮೂಲಕ ಅಭಿವೃದ್ಧಿಪಡಿಸುತ್ತಿರುವ COVID ರೆಫರಲ್‌ಗಳ ಪ್ಯಾರಲೆಲ್ ವ್ಯವಸ್ಥೆಗಳನ್ನು ನಿಲ್ಲಿಸಲು ನಾವು ನಿಮ್ಮನ್ನು ಒತ್ತಾಯಿಸುತ್ತೇವೆ. ಈ ಸಮಯದಲ್ಲಿ, ಯಾವುದೇ ಸಂಸದ ಮತ್ತು ಶಾಸಕರಿಗೆ ಅಂತಹ ಪ್ಯಾರಲೆಲ್ ವಸ್ಥೆಗಳನ್ನು ಅಭಿವೃದ್ಧಿಪಡಿಸಲು ಅವಕಾಶ ನೀಡಬಾರದು, ಅದು ತಪ್ಪಿಸಬಹುದಾದ ಅವ್ಯವಸ್ಥೆಗೆ ಕಾರಣವಾಗುತ್ತದೆ, ಮತ್ತು ಈಗಾಗಲೇ ಬಳಲುತ್ತಿರುವ ಲಕ್ಷಾಂತರ ಜನರ ಸಾವಿನ ಸಂಖ್ಯೆ ಮತ್ತು ದುಃಖವನ್ನು ಹೆಚ್ಚಿಸುತ್ತದೆ.
೧೬)ಸರ್ಕಾರ ದ್ವೇಷವನ್ನು ಹರಡುವ ಮತ್ತು ಕೋಮುವಾದವನ್ನು ಉಂಟುಮಾಡುವ ಯಾರೊಂದಿಗೂ ಶೂನ್ಯ ಸಹಿಷ್ಣುತೆ ಇರುತ್ತದೆ ಎಂದು ಹೇಳಿಕೆ ನೀಡಬೇಕು.

*Required

1. ಹೆಸರು *

_____

2. ಊರು *

_____

This content is neither created nor endorsed by Google.

Google Forms